**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. ಸಂಃ 3741/2022**

| | | |
|---|---|---|
| ಸಾಕ್ಷಿಯ ಹೆಸರುಃ | ಲೋಕೇಶ | ಪ್ರಾಸಾಃಃ 1 |
| ತಂದೆಯ ಹೆಸರುಃ | ಮೈಲಾರಿಗೌಡ | ಚಾಸಾಃಃ 1 |
| ವಯಸ್ಸುಃ | 26 ವರ್ಷ | ಪ್ರಮಾಣೀಕರಿಸಿದ ದಿಃ 16.04.2025. |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ನವಿಲೂರು ಗ್ರಾಮ, ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಮೃತ ಮೈಲಾರಿಗೌಡ ನನ್ನ ತಂದೆ. ಆರೋಪಿ ನನಗೆ ಗೊತ್ತಿಲ್ಲ.

2. ದಿಃ 26.04.2022 ರಂದು ನನ್ನ ತಂದೆ ಮಧ್ಯಾಹ್ನ 1-30 ಗಂಟೆಗೆ ಪಿರಿಯಾಪಟ್ಟಣಕ್ಕೆ ಅಸೀಟ್ ಬಿಡಿಸಲು ಬಂದಿದ್ದರು. ನಂತರ ನಾನು ಮನೆಯಲ್ಲಿ ಇದ್ದಾಗ ಮಧ್ಯಾಹ್ನ ಸುಮಾರು 3-00 ಗಂಟೆ ಸಮಯದಲ್ಲಿ ನನಗೆ ಚಾಸಾ - 2 ಕುಮಾರ ರವರು ಫೋನ್ ಮಾಡಿ ನನ್ನ ತಂದೆಗೆ ಪರಿಯಾಪಟ್ಟಣದ ವಿರುಪಾಕ್ಷ ರವರ ತೋಟದ ಹತ್ತಿರ ಬಿ.ಎಂ ರಸ್ತೆಯಲ್ಲಿ ಅಪಘಾತವಾಗಿ, ಅವರನ್ನು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದರು. ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ, ನನ್ನ ತಂದೆಗೆ ಅಪಘಾತವಾಗಿ ಎರಡೂ ಕಾಲು ಮುರಿದು, ಎಡ ಕೈ ಮುರಿದಿತ್ತು. ಎದೆ ಮತ್ತು ಹೊಟ್ಟೆಯ ಭಾಗಕ್ಕೆ ತಲೆಗೆ ಏಟಾಗಿತ್ತು.

3. ನಂತರ ಅಲ್ಲೆ ಇದ್ದ ಚಾಸಾ - 2 ರವರನ್ನು ವಿಚಾರಿಸಿದಾಗ, ಅವರು ವಿರುಪಾಕ್ಷ ರವರ ತೋಟದ ಹತ್ತಿರ ಹೋಗುತ್ತಿದ್ದಾಗ, ನನ್ನ ತಂದೆ ಅವರ ಮುಂದೆ ಕೆಎ.03.ಹೆಇ.369 ರ ಹೊಂಡಾ ಸ್ಕೂಟಿಯಲ್ಲಿ ಪಿರಿಯಾಪಟ್ಟಣದಿಂದ ಕುಶಾಲನಗರ ಕಡೆಗೆ ಹೋಗುತ್ತಿದ್ದಾಗ, ಕುಶಾಲನಗರ ಕಡೆಯಿಂದ ಬರುತ್ತಿದ್ದ ಮಾರುತಿ ಅಲ್ಟೋ ಕಾರು ಚಾಲಕ ತನ್ನ ಕಾರನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು, ನನ್ನ ತಂದೆಯ ಬೈಕಿಗೆ ಡಿಕ್ಕಿಪಡಿಸಿದ ಎಂದು ತಿಳಿಸಿದರು. ಆಗ ನಮ್ಮ ತಂದೆ ಕೆಳಗೆ ಬಿದ್ದು, ಅವರನ್ನು ಚಾಸಾ- 2 ರಿಂದ 4 ರವರು ಎತ್ತಿ ಸುಧಾರಿಸಿದರು ಎಂದು ತಿಳಿಸಿದರು. ಅಪಘಾತಪಡಿಸಿದ ಕಾರಿನ ನಂಬರ್

ಕೆಎ.11.ಎಂ.3749 ಅಲ್ಟೋ ಕಾರ್ ಆಗಿತ್ತು ಎಂದು ತಿಳಿಸಿದರು. ನಂತರ ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುವುದಾಗಿ ತಿಳಿಸಿದರು.

4. ನಂತರ ನಮ್ಮ ತಂದೆಯವರನ್ನು ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸಗೆ ಮೈಸೂರಿಗೆ ಅಂಬ್ಯುಲನ್ಸ್ ನಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ, ಮಾರ್ಗಮಧ್ಯೆದಲ್ಲಿ ಅವರು ಮೃತಪಟ್ಟಿರುತ್ತಾರೆ. ನಂತರ ಅವರ ಶವವನ್ನು ವಾಪಸ್ ಪಿರಿಯಾಪಟ್ಟಣ ಆಸ್ಪತ್ರೆಗೆ ಕರೆದುಕೊಂಡು ಬಂದೆವು.

5. ಆ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಸಾಕ್ಷಿ ದೂರಿನಲ್ಲಿರುವ ತಮ್ಮ ಸವುಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ - 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 1(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃಆರೋಪಿ ಪರ ವಕೀಲರಿಂದಃ</u>

1. ನಾನು 10 ನೇ ತರಗತಿವರೆಗೆ ಓದಿದ್ದೇನೆ.
2. ಅಪಘಾತವನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ.
3. ಅಪಘಾತ ಯಾರ ಅಜಾಗರೂಕತೆಯಿಂದ ಆಗಿದೆ ಎಂದು ನಿಮಗೆ ಖುದ್ದಾಗಿ ನೋಡಿಲ್ಲ ಎಂದರೆ, ಸರಿ.
4. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗದೇ ಇದ್ದರೂ, ವಿಮಾ ಪರಿಹಾರದ ಹಣ ಪಡೆಯಲು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>

<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಪಿರಿಯಾಪಟ್ಟಣ.